ಪಿ ಸಿ ಆರ್ ನಂ. 40 /2019

ಸಾಕ್ಷಿಗೆ ದಿನಾಂಕ 05-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1

| | | |
|---|---|---|
| ಹೆಸರು | ಃ | ಹೆಚ್ ಗಂಗಪ್ಪ |
| ತಂದೆಯ ಹೆಸರು | ಃ | ಹನುಮಂತಪ್ಪ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಹಂಪಸಾಗರ |

ಮುಖ್ಯ ವಿಚಾರಣೆ ಪಿರ್ಯಾದಿಯಿಂದಃ-

ನಾನು ಸದರಿ ಪ್ರಕರಣದಲ್ಲಿ ಪಿರ್ಯಾದುದಾರನಾಗಿರುತ್ತೇನೆ. ನಾನು ನ್ಯಾಯಬೆಲೆ ಅಂಗಡಿಯನ್ನು ಹೊಂದಿರುತ್ತೇನೆ.

ದಿಃ 10-08-2019 ರಂದು ಮದ್ಯಾಹ್ನ 3 ಗಂಟೆ ಸಮಯದಲ್ಲಿ ನಾನು ನನ್ನ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಅಕ್ಕಿ ಹಂಚುತ್ತಿರುವಾಗ ನನ್ನ ಹೆಂಡತಿ ಗಾಬರಿಯಿಂದ ನನ್ನ ನ್ಯಾಯಬೆಲೆ ಅಂಗಡಿಗೆ ಬಂದಿದ್ದು ಯಾರೋ ದೌರ್ಜನ್ಯದಿಂದ ನನ್ನನ್ನು ಕರೆಯುವಂತೆ ತಿಳಿಸಿರುವುದಾಗಿ ಹಾಗೂ ಮನೆಯ ಒಳಗೆ ಬೈಯುತ್ತಾ ಪ್ರವೇಶ ಮಾಡಿರುವುದಾಗಿ ತಿಳಿಸಿದ್ದು ನಾನು ಆ ತಕ್ಷಣವೇ ಮನೆಗೆ ಹೋಗಿರುತ್ತೇನೆ. ನಾನು ಮನೆಗೆ ಹೋದಾಗ ಶ್ರೀ ವಿ ಹೆಚ್. ಲೋಕೇಶ್, ಸಹಾಯಕ ಆಯುಕ್ತರು ನನ್ನ ಮೇಲೆ ಹಲುವಾರು ದೂರುಗಳು ಬಂದಿವೆ ಆತನಿಗೆ ಹಣವನ್ನು ಕೊಟ್ಟಲ್ಲಿ ಎಲ್ಲಾ ಸರಿ ಮಾಡುವುದಾಗಿ ನನಗೆ ತಿಳಿಸಿದರು. ನಾನು ಒಪ್ಪದಿದ್ದ ಕಾರಣ ಸದರಿ ವ್ಯಕ್ತಿಯು ನ್ಯಾಯಬೆಲೆ ಅಂಗಡಿಯಿಂದ ಅಕ್ಕಿಯನ್ನು ತೆಗೆದುಕೊಂಡು ಹೋಗುತ್ತಿದ್ದಂತಹ ಶ್ರೀ ಹೆಚ್ . ಜಂಭಪ್ಪ, ಶ್ರೀ ಸುರೇಶ ಹಾಗೂ ಹನುಮಂತಪ್ಪ ಮತ್ತು ಫಕ್ಕಿ ಸಂತೋಷ ಎಂಬ ವ್ಯಕ್ತಿಗಳನ್ನು ವಿಚಾರಿಸಿ ಅವರ ಕೈಯಲ್ಲಿದ್ದ ಅಕ್ಕಿಯ ಚೀಲವನ್ನು ಪರಿಶೀಲಿಸಿದರು. ಆಗ

ಸದರಿ ಚೀಲಗಳ ತೂಕವು ಸರಿಯಾಗಿತ್ತು. ಸದರಿ ವ್ಯಕ್ತಿಗಳು ನಾನು ಯಾವುದೇ ತಪ್ಪುಗಳನ್ನು ಮಾಡಿರುವುದಿಲ್ಲ ಪ್ರಮಾಣೀಕವಾಗಿ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವುದಾಗಿ ತಿಳಿಸಿದರೂ ಕೇಳದೇ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಕಳೆದ 20 ವರ್ಷಗಳಿಂದ ಸನ್ನದುದಾರರಾಗಿ ನ್ಯಾಯಬೆಲೆ ಅಂಗಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಕಾಲಕಾಲಕ್ಕೆ ತನ್ನ ಮೇಲಾಧಿಕಾರಿಗಳು ಹಾಗೂ ನೋಡಲ್ ಅಧಿಕಾರಿಗಳು ನ್ಯಾಯಬೆಲೆ ಅಂಗಡಿಯನ್ನು ಪರಿಶೀಲಿಸುತ್ತಾರೆಂದು ಹೇಳಿದರೂ ಶ್ರೀ ವಿ.ಹೆಚ್ ಲೋಕೇಶ್ ಕೇಳಿರುವುದಿಲ್ಲ ಹಾಗೂ ರಿಜಿಸ್ಟರ್ ಗಳನ್ನು ಕೊಡುವಂತೆ ನನ್ನನ್ನು ಕೇಳಿದ್ದು ನಾನು ಅನ್ ಲೈನಿನಲ್ಲಿ ಎಲ್ಲಾ ಎಂಟ್ರಿಗಳಾಗುವ ಕಾರಣ ರಿಜಿಸ್ಟರುಗಳನ್ನು ಇಟ್ಟಿರುವುದಿಲ್ಲವೆಂದು ಹೇಳಿದರೂ ಕೇಳದೇ ನ್ಯಾಯಬೆಲೆ ಅಂಗಡಿಯನ್ನು ಎಷ್ಟು ಕ್ಲೀನಾಗಿ ಇಟ್ಟುಕೊಂಡಿದ್ದೀಯಾ ಎಂದು ಏಕಾಏಕಿ ಅಲ್ಲಿದ್ದಂತಹ ಅಕ್ಕಿಯನ್ನೆಲ್ಲಾ ಚೆಲ್ಲಾಡಿದರು.

(ಪಿರ್ಯಾದಿಯ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ